# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **1948** |
| 2 | ಸದಸ್ಯರ ಹೆಸರು | ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸಬೇಕಾದ ದಿನಾಂಕ | 16.03.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಭೂದಾಖಲೆಗಳ ಹಾಗೂ ನಗರ ಭೂಮಾಪನ ತಂಡ-3 ಕ್ಕೆ ಒಳಪಡುವ ವಿಭಾಗ ಸಂಖ್ಯೆ 41 ರ ಸ್ಥಳೀಯ ಪ್ರದೇಶಕ್ಕೆ ಒಳಪಡುವ ಸಿಟಿಎಸ್ 1059, 1060 ಹಾಗೂ 1061 ಈ ಮೂರು ಸಿ.ಟಿ.ಎಸ್/ನಿವೇಶನ ಸ್ವತ್ತುಗಳ ಕಂದಾಯ ಸರ್ವೇಕ್ಷಣಾ ಇಲಾಖೆಯ ದಾಖಲೆಗಳ ಪ್ರಕಾರ ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಅಕ್ಕಿತಿಮ್ಮನಹಳ್ಳಿ ಗ್ರಾಮದ ಯಾವ ಸರ್ವೆ ವ್ಯಾಪ್ತಿಗೆ ಬರುತ್ತದೆ; (ವಿವರಗಳನ್ನು ನೀಡುವುದು) | ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ನಗರಮಾಪನ ತಂಡ-03 ರ ವ್ಯಾಪ್ತಿಗೆ ಒಳಪಡುವ ಸ್ಥಳೀಯ ಕ್ಷೇತ್ರ ಸಂಖ್ಯೆ-41, ಶಾಂತಿ ನಗರದ ಪಿ.ಟಿ ಶೀಟ್ ನಂಬರ್ 437 ರ ಸಿ.ಟಿ.ಎಸ್. ನಂ.1059, 1060 ಮತ್ತು 1061ಗಳು ನಗರಮಾಪನ ಆಸ್ತಿಗಳಾಗಿರುತ್ತವೆ.<br>ಅಕ್ಕಿ ತಿಮ್ಮನಹಳ್ಳಿ ಗ್ರಾಮವು ಸಂಪೂರ್ಣವಾಗಿ ನಗರಮಾಪನ ವ್ಯಾಪ್ತಿಗೆ ಒಳಪಟ್ಟಿದ್ದು, ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 148 ರಲ್ಲಿ ವಿವರಿಸಿರುವಂತೆ ನಗರಾಸ್ತಿಗಳ ಆಸ್ತಿಗಳ ಆಧಾರದ ಮೇಲೆ ಅಳತೆ ಹಾಗೂ ವಿಚಾರಣೆ ಕೈಗೊಂಡು ಹಕ್ಕನ್ನು ಸ್ಥಿರೀಕರಿಸಲಾಗಿರುತ್ತದೆ. ಪ್ರತ್ಯೇಕವಾಗಿ ಸರ್ವೆ ನಂಬರ್ ಆಧಾರದಂತೆ ಆಸ್ತಿಗಳನ್ನು ವಿಂಗಡಿಸಿರುವುದಿಲ್ಲ. |
| ಆ) | ಸಿಟಿಎಸ್ 1059, 1060 ಹಾಗೂ 1061 ಈ ಮೂರು ಸಿಟಿಎಸ್ ನಿವೇಶನವು ಹೊಂದಿ ರುವ ಸ್ವತ್ತುಗಳ ಮೂಲ ಮಾಲೀಕರ ಹೆಸರುಗಳಾವುವು (ವಿವರಗಳನ್ನು ನೀಡುವುದು ಮತ್ತು ತದ ನಂತರ ಕಾಲಾವಧಿಯಲ್ಲಿ ಕಾನೂನು ರೀತಿಯಲ್ಲಿ ಅನ್ಯರಿಗೆ ಪರಭಾರೆ ಆಗಿದ್ದಲ್ಲಿ ಅದರ ವಿವರಗಳನ್ನು ನೀಡುವುದು) | 1. ಸಿ.ಟಿ.ಎಸ್ ನಂ.1059 ಪಿ.ಆರ್ ಕಾರ್ಡಿನಂತೆ 894.3 ಚಮೀ ವಿಸ್ತೀರ್ಣವಿದ್ದು, ಶ್ರೀ.ಅಣ್ಣಯ್ಯಪ್ಪ ಬಿನ್ ಚಿನ್ನಣ್ಣ ಎಂಬುವವರು ಮಾಲೀಕರಾಗಿರುತ್ತಾರೆ. ನಂತರ ವಿಚಾರಣಾಧಿಕಾರಿಗಳು ನಗರಮಾಪನ ತಂಡ-03, ಬೆಂಗಳೂರು ಇವರ ಆದೇಶ ಸಂಖ್ಯೆ:ಇ.ಒ/ಸಿ.ಟಿ.ಎಸ್-3/ಅಪೀಲು-2/96-97, ದಿನಾಂಕ: 30-07-2005 ರನ್ವಯ ಶ್ರೀಮತಿ ಎಸ್.ಕೆ. ಲೀಲಾವತಿ ಕೋಂ ಎಸ್. ಕೃಷ್ಣಮೂರ್ತಿ ರವರ ಹೆಸರನ್ನು ಆಸ್ತಿದಾರಕರನ್ನಾಗಿ ದಾಖಲು ಮಾಡಲಾಗಿರುತ್ತದೆ.<br>2. ಸಿ.ಟಿ.ಎಸ್ 1060 ರಲ್ಲಿ ಪಿ.ಆರ್ ಕಾರ್ಡಿನಂತೆ ವಿಸ್ತೀರ್ಣ 810.0 ಚಮೀ ಶ್ರೀ.ಅಣ್ಣಯ್ಯಪ್ಪ ಬಿನ್ ಚಿನ್ನಣ್ಣ ಎಂಬುವವರು ಮಾಲೀಕರಾಗಿರುತ್ತಾರೆ ನಂತರ ವಿಚಾರಣಾಧಿಕಾರಿಗಳು, ನಗರಮಾಪನ ತಂಡ-3 ಬೆಂಗಳೂರು ಇವರ ಆದೇಶ ಸಂಖ್ಯೆ:ಇ.ಒ/ಸಿ.ಟಿ.ಎಸ್-3/ಅಪೀಲು-2/ 96-97, ದಿನಾಂಕ:30-07-2005ರನ್ವಯ "ಅಭಯ ಎಸ್ಟೇಟ್" ರವರ ಹೆಸರನ್ನು ಆಸ್ತಿದಾರಕರಾಗಿ ದಾಖಲು ಮಾಡಲಾಗಿರುತ್ತದೆ.<br>3. ಸಿ.ಟಿ.ಎಸ್-1061 ರ ಕುರಿತು ವಿಚಾರಣಾಧಿಕಾರಿಗಳು, ನಗರ ಮಾಪನ ತಂಡ-3, ಬೆಂಗಳೂರು ಇವರ ಪ್ರಕರಣ ಸಂಖ್ಯೆ:ಇ.ಒ/ಸಿ.ಟಿ.ಎಸ್-3/ಅಪೀಲು-2/96-97, ದಿನಾಂಕ:30-07-2005 ರ ವಿಚಾರಣೆ ಕಾಲಕ್ಕೆ ಹಕ್ಕುದಾರರು ಸರಿಯಾದ ಹಕ್ಕು ದಾಖಲೆ ಸಲ್ಲಿಸದಿದ್ದರಿಂದ ಅರ್ಜಿಯನ್ನು ತಿರಸ್ಕರಿಸ ಲಾಗಿರುತ್ತದೆ. |

<table>
<tr><td>ಇ)</td><td>ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಅಕ್ಕಿತಿಮ್ಮನಹಳ್ಳಿ ಗ್ರಾಮದ ಸ.ನಂ.9ನ್ನು ಸರ್ಕಾರದಿಂದ ಅಥವಾ ಮುನಿಸಿಪಾಲಿಟಿಯಿಂದ ಭೂಸ್ವಾಧೀನ ವಾಗಿದೆಯೇ; (ಹಾಗಿದ್ದಲ್ಲಿ ಸಂಪೂರ್ಣ ವಿವರಗಳನ್ನು ನೀಡುವುದು)</td><td rowspan="2">ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿ ಅಕ್ಕಿ ತಿಮ್ಮನಹಳ್ಳಿ ಗ್ರಾಮದ ಸರ್ವೆ ಸಂ.9 ಮತ್ತು ಸ.ನಂ.12 ರ ಕುರಿತು ಭೂದಾಖಲೆಗಳಂತೆ ಭೂಸ್ವಾಧೀನವಾಗಿರುವ ಮಾಹಿತಿ ಕಂಡುಬರುತ್ತಿಲ್ಲ.</td></tr>
<tr><td>ಈ)</td><td>ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಅಕ್ಕಿತಿಮ್ಮನಹಳ್ಳಿ ಗ್ರಾಮದ ಸ.ನಂ.12 ನ್ನು ಸರ್ಕಾರ ದಿಂದ ಅಥವಾ ಮುನಿಸಿಪಾಲಿಟಿಯಿಂದ ಭೂಸ್ವಾಧೀನ ವಾಗಿದೆಯೇ; (ಹಾಗಿದ್ದಲ್ಲಿ ಸಂಪೂರ್ಣ ವಿವರಗಳನ್ನು ನೀಡುವುದು)</td></tr>
<tr><td>ಉ)</td><td>ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಅಕ್ಕಿತಿಮ್ಮನಹಳ್ಳಿ ಗ್ರಾಮದ ಸ.ನಂ.12 ರ ಪೈಕಿ ಮರು ಸರ್ವೆ (Re-Survey) ಪ್ರಕ್ರಿಯೆ ಆಗಿ ಬದಲಾಗಿ ದೆಯೇ; (ಹಾಗಿದ್ದಲ್ಲಿ ಸಂಪೂರ್ಣ ವಿವರ ಗಳನ್ನು ನೀಡುವುದು)</td><td>ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿ ಅಕ್ಕಿ ತಿಮ್ಮನಹಳ್ಳಿ ಗ್ರಾಮದ ಸರ್ವೆ ಸಂ.12 ರ ಸನ್ 1888 ನೇ ಸಾಲಿನಲ್ಲಿ ಮೂಲ ಸರ್ವೆ ಮಾಡಲಾಗಿದ್ದು ಸನ್ 1955 ನೆ ಸಾಲಿನಲ್ಲಿ ಹಿಸ್ಸಾ ಸರ್ವೆ ಮಾಡಲಾಗಿದೆ ಸ.ನಂ.12ರಲ್ಲಿ 1 ರಿಂದ 11 ಹಿಸ್ಸಾಗಳಾಗಿರುತ್ತವೆ.</td></tr>
</table>

**ಸಂಖ್ಯೆ: ಕಂಇ 84 ಎಸ್ಎಸ್‌ಸಿ 2022**

**(ಆರ್.ಅಶೋಕ)**
ಕಂದಾಯ ಸಚಿವರು